**ಓ ಎಸ್ ನಂಃ 976-14**
**ಪಿ ಡಬ್ಲ್ಯೂ ಃ 1**

**ದಿಃ 11-06-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ** ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸಿಕೊಂಡು ಶ್ರೀ ಜಿ ಪಿ **ವಕೀಲರಿಂದ**

**58.** ಮೂಲ ಪುರುಷ ಚಿಕ್ಕಳ್ಳಪ್ಪ ರವರ ನಾಲ್ಕು ಜನ ಗಂಡು ಮಕ್ಕಳು ಅವರವರ ವ್ಯವಹಾರವನ್ನು ಪ್ರತ್ಯೇಕವಾಗಿ ಮಾಡಿಕೊಂಡು ಸಂಸಾರ ಮಾಡುತ್ತಿದ್ದರು ಅಂದರೆ ಸರಿ. ಅದೇ ರೀತಿ ಹನುಮಂತಯ್ಯ, ಕದರಯ್ಯನ ಮಗ ಕುರುಡುನರಸಿಂಹಯ್ಯ ಹಾಗೂ ಅವರ ಮಗ ಕದರಪ್ಪ ಮತ್ತು ಮಾರಣ್ಣನ ಮಕ್ಕಳು ಪ್ರತ್ಯೇಕವಾಗಿ ವ್ಯವಹಾರ ಮಾಡಿಕೊಂಡು ಸಂಸಾರ ಮಾಡುತ್ತಿದ್ದರು ಅಂದರೆ ಸರಿ. ಅವರದ್ದು ಪಡಿತರ ಚೀಟಿ, ಮತದಾರರ ಚೀಟಿಯಲ್ಲಿರುವ ಹೆಸರುಗಳು ಪ್ರತ್ಯೇಕವಾಗಿತ್ತು ಅಂದರೆ ಸರಿ.

**59.** ಚಿಕ್ಕಳ್ಳಪ್ಪನ ಮಕ್ಕಳು ಬಾಯಿ ಮಾತಿನ ಮೂಲಕ ವಿಬಾಗ ಮಾಡಿಕೊಂಡಿದ್ದರು ಅಂದರೆ ಸರಿ. ಚಿಕ್ಕಳ್ಳಪ್ಪನ ಮಕ್ಕಳು ಹನುಮಂತಯ್ಯ, ಕದರಯ್ಯ, ಮಾರಣ್ಣ ರವರ ಬಾಗಗಳಿಗೂ ನನಗೂ ತಕರಾರು ಇಲ್ಲ. ನಾನು ಈ ದಾವೆಯಲ್ಲಿ ಎಲ್ಲಾ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸಾಕ್ಷಿ ಒಬ್ಬರನ್ನು ಮಾತ್ರ ಮಾಡಿದ್ದೇನೆಂದು ಹೇಳುತ್ತಾರೆ. ನಾನು ಪ್ರತಿವಾದಿಗಳ ಪ್ರತಿವಾದಿ ಪತ್ರದ ಅಂಶಗಳನ್ನು ಓದಿ ತಿಳಿದುಕೊಂಡಿದ್ದೇನೆ. ಅದರಲ್ಲಿರುವ ವಿಚಾರಗಳು ಸರಿ ಇದೆ ಅಂದರೆ ಸರಿಯಲ್ಲ. ಮೇಲೆ ಹೇಳಿದಂತ ವಿಬಾಗದ ವಿಚಾರಗಳನ್ನು ಅದರಲ್ಲಿ ಹೇಳಿದ್ದಾರೆ ಅಂದರೆ ಸರಿಯಲ್ಲ.

**60.** ಅವರುಗಳಿಗೆ ವಿಬಾಗದಲ್ಲಿ ಬಂದಂತಹ ಆಸ್ತಿಗಳಲ್ಲಿ ಕೆಲವನ್ನು ಮಾರಾಟ ಮಾಡಿದ್ದಾರೆ ಅಂದರೆ ಸರಿ. ಕೊಂಡುಕೊಂಡರವರನ್ನೆಲ್ಲಾ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿಯಲ್ಲ. ಕದರಪ್ಪ ರವರಿಂದ ಅಶ್ವತ್ತನಾರಾಯಣಪ್ಪ ಕೊಂಡುಕೊಂಡಿದ್ದಾರೆ ಅಂದರೆ ಸರಿ. ಅವರ ಹೆಸರಲ್ಲಿ ಖಾತೆ ಆಗಿದೆ ಹಾಗೂ ಅವರ ಅನುಭವದಲ್ಲಿದೆ ಅಂದರೆ ಸಾಕ್ಷಿ ಖಾತೆ ಆಗಿದೆ ಆದರೆ ಅನುಬವ ಇಲ್ಲ ಎಂದು ಹೇಳುತ್ತಾರೆ.

**61.** ಚಿಕ್ಕಳ್ಳಪ್ಪನ ನಾಲ್ಕು ಮಕ್ಕಳ ಮದ್ಯೆ ಯಾವಾವ ಸ್ವತ್ತು ಬಂದಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾಲ್ಕು ಜನ ಮಕ್ಕಳಿಗೆ ಯಾವಾವ ಐಟಂಗಳು ಬಂದಿದೆ ಎಂದು ತಕರಾರಿನಲ್ಲಿ ಹೇಳಿದ್ದಾರೆಂದರೆ ನನಗೆ ಗೊತ್ತಿಲ್ಲ. ತಕರಾರಿನಲ್ಲಿ ಯಾರಾರಿಗೆ ಯಾವಾವ ಸ್ವತ್ತುಗಳು ಬಂದಿದೆ ಎಂದು ಹೇಳಿರುವ ವಿಚಾರವನ್ನು ನನ್ನ ತಂದೆ ಪ್ರಸ್ತಾಪ ಎರಡು ವರ್ಷದ ಹಿಂದೆ ಮಾಡಿದ್ದೇನೆ. ಅವರು ಅವಾಗ ಚೆನ್ನಾಗಿದ್ದರು ಅಂದರೆ ಸರಿ. ಅವರು ಇವಾಗಲೂ ಚೆನ್ನಾಗಿದ್ದಾರೆ ಅಂದರೆ ಅವರು ಈಗ ಚೆನ್ನಾಗಿಲ್ಲ. ಗಂಟಲು ನೋವು ಮತ್ತು ಮಂಡಿ ನೋವುನಿಂದ ಬಳಲುತ್ತಿದ್ದಾರೆ. ಅವರು ಇವಾಗಲೂ ಚೆನ್ನಾಗಿದ್ದು, ಸಾಕ್ಷಿ ಹೇಳಿದರೆ ಸತ್ಯ ಹೇಳುತ್ತಾರೆಂದು ಅವರಿಂದ ಸಾಕ್ಷಿ ಹೇಳಿಸಿಲ್ಲ ಅಂದರೆ ಸರಿಯಲ್ಲ. ಅವರ ಅನಾರೋಗ್ಯದ ಬಗ್ಗೆ ಯಾವುದೇ ದಾಖಲಾತಿ ಕೊಟ್ಟಿಲ್ಲ ಅಂದರೆ ಸರಿಯಲ್ಲ.

62. ಉಗ್ರಯ್ಯನ ತಂದೆ ಹನುಮನರಸಯ್ಯರವರು ತಮ್ಮ ಹಳ್ಳಪ್ಪನಿಗೆ ಹಕ್ಕು ನಿವೃತ್ತಿ ಪತ್ರವನ್ನು ಅವರ ಬಾಗಕ್ಕೆ ಸಂಬಂದಪಟ್ಟಂತೆ 1964 ರಲ್ಲಿ ಬರೆದುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಅದು ನೋಂದಾಯಿತ ಪತ್ರ ಅಂದರೆ ಸಾಕ್ಷಿ ಅದು ಸುಳ್ಳು ಪತ್ರ ಎಂದು ನುಡಿಯುತ್ತಾರೆ. ಆತನು ಎಲ್ಲಾ ಸ್ವತ್ತುಗಳನ್ನು ಬರೆದುಕೊಟ್ಟಿರುವುದರಿಂದ ನನ್ನ ತಂದೆಗೆ ಯಾವುದೇ ಬಾಗ ಬರಬೇಕಿಲ್ಲ ಅಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ಬರೆದಿರುವ ಬಾಗದ ಸ್ವತ್ತುಗಳು ಅವರ ಅನುಬವದಲ್ಲಿದ್ದು, ಉಗ್ರಯ್ಯನ ಸ್ವತ್ತಿನಲ್ಲಿ ಅವರ ನಾಲ್ಕು ಜನ ಮಕ್ಕಳು ಬಾಗ ಮಾಡಿಕೊಂಡಿದ್ದರು ಅಂದರೆ ಸರಿಯಲ್ಲ. ಆ ಬಾಗದ ನನ್ನ ತಾತನ ಆಸ್ತಿಯನ್ನು ಹಳ್ಳಪ್ಪನಿಗೆ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುವುದು ಅಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ನಾನು ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**